

ಪೌಷ್ಟಿಕ ಆಹಾರ ದಾನ್ಯಗಳ ಪೂರೈಕೆ

## ‘ವಿಶ್ವ ಹ್ಯಾಬಿಟ್ಯಾಟ್’ ಚಿನ್ನದ ಪದಕದ ಬೆಳಕಿನಲ್ಲಿ

# ಸಮಗ್ರ ಗ್ರಾಮೀಣ ಆಶ್ರಮ

**ಪಾರಂಪರಿಕವಾಗಿ ಪಂಚಮರಾಗಿ ಕತ್ತಲ ಹಿನ್ನೆಲೆಯಲ್ಲೇ ಉಳಿದಿದ್ದ ಕೊರಗ ಸಮುದಾಯಲ್ಲೀಗ ಒಂದು ಬೆಳ್ಳಿಚುಕ್ಕಿ. ಅಸ್ಪೃಶ್ಯತೆಯ ಜಾಡ್ಯದಿಂದ ಅರಿವಿನ ಜಾಡು ಹಿಡಿದು ನಡೆಯುತ್ತಿರುವ ಸಮುದಾಯದ ಕೆಲಸಕ್ಕಾಗಿ, ‘ಸಮಗ್ರ ಗ್ರಾಮೀಣ ಆಶ್ರಮ’ಕ್ಕೆ ವಿಶ್ವಸಂಸ್ಥೆಯ 2019ರ ‘ವಿಶ್ವ ಹ್ಯಾಬಿಟ್ಯಾಟ್’ ಚಿನ್ನದ ಪದಕದ ಗೌರವ ದೊರೆತಿದೆ. ಈ ಹಿನ್ನೆಲೆಯಲ್ಲಿ, ಆಶ್ರಮದ ಅಧ್ಯಕ್ಷೆ ಶಕುಂತಲಾ ಅವರ ಜೊತೆ ‘ಸುಧಾ’ ಮಾತುಕತೆ.**

**■ ರಾಘವೇಂದ್ರ ಕೆ.**

‘ವಿಶ್ವ ಹ್ಯಾಬಿಟ್ಯಾಟ್’ ಚಿನ್ನದ ಪದಕ ಇದೇ ಮೊದಲ ಬಾರಿಗೆ ಕರ್ನಾಟಕಕ್ಕೆ ಒಲಿದುಬಂದಿದೆ. ಸಾಮಾಜಿಕ ಸುಧಾರಣೆಗೆ ಸಂಬಂಧಿಸಿದಂತೆ ವಿಶ್ವಸಂಸ್ಥೆ ನೀಡುವ ಈ ಪುರಸ್ಕಾರ, ಕೊರಗ ಸಮುದಾಯದ ಸ್ವಾಭಿಮಾನ ಮತ್ತು ಮಾನವ ಹಕ್ಕುಗಳ ರಕ್ಷಣೆಗೆ ದುಡಿಯುತ್ತಿರುವ ಉಡುಪಿಯ ‘ಸಮಗ್ರ ಗ್ರಾಮೀಣ ಆಶ್ರಮ’ಕ್ಕೆ ದೊರೆತಿದೆ. ಫೆ.7ರಂದು ದುಬೈನ ಅಬುಧಾಬಿಯಲ್ಲಿ ಆಶ್ರಮದ ಅಧ್ಯಕ್ಷೆ ಶಕುಂತಲಾ ಅವರಿಗೆ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ. ಆಶ್ರಮದ ಕೆಲಸ ಹಾಗೂ ಶಕುಂತಲಾ ಅವರ ವೈಯಕ್ತಿಕ ನಾಣ್ಯವೊಂದರ ಎರಡು ಮುಖಗಳಂತಿರುವುದು ವಿಶೇಷ.

ಉಡುಪಿ ತಾಲ್ಲೂಕಿನ ಕಲ್ಯಾಣಪುರ ಸಂತೆಕಟ್ಟೆಯಿಂದ ಒಂದು ಕಿ.ಮೀ. ದೂರದಲ್ಲಿರುವ ನೇಜರ ಗ್ರಾಮದಲ್ಲಿ ಶಕುಂತಲಾ ಅವರ ಕುಟುಂಬ ನೆಲೆಸಿದೆ. ಅವರ ಪತಿ ಸಂಜೀವ ಕಲ್ಯಾಣಪುರದಲ್ಲಿ ಆಟೊ ಚಾಲಕರು. ಅವರಿಗೆ ‘ಸಮಗ್ರ ಗಿರಿಜನ ಅಭಿವೃದ್ಧಿ ಇಲಾಖೆ’ (ಐಟಿಡಿಪಿ) ಸ್ವಯಂ ಉದ್ಯೋಗ ಯೋಜನೆಯಡಿ ಆಟೋ ಕೊಟ್ಟಿದೆ. ಹುಟ್ಟಿನಿಂದಲೂ ಅಸ್ಪೃಶ್ಯತೆಯನ್ನು ಉಂಡಿದ್ದ ಸಂಜೀವ ಅವರಿಗೆ ಆಟೊ ಸಿಕ್ಕಾಗ ಸಣ್ಣ ಅಳುಕು ಇತ್ತಂತೆ. ‘ನಮ್ಮ ಆಟೋವನ್ನು ಯಾರು ಹತ್ತುತ್ತಾರೆ ಎಂಬ ಆತಂಕ ನಿಧಾನವಾಗಿ ದೂರವಾಯ್ತು. ಭಟ್ಟರು–ಶೆಟ್ಟರು ಎಂಬ ಭೇದ ಇಲ್ಲದೆ ಎಲ್ಲರೂ ನನ್ನ ಆಟೊ ಹತ್ತುತ್ತಾರೆ. ಕೆಲವು ಅರ್ಚಕರೂ ಪೂಜೆಗೆ ಹೋಗಲು ಫೋನ್ ಮಾಡಿ ಕರೆಸಿಕೊಂಡು ಪ್ರಯಾಣ ಮಾಡುತ್ತಾರೆ. ಒಟ್ಟಾರೆ ನನ್ನ ಜೀವನಕ್ಕೆ ಆರ್ಥಿಕ ಭದ್ರತೆ ಸಿಕ್ಕಿದೆ’ ಎಂದು ಸಂಜೀವ ಹೇಳುತ್ತಾರೆ.

ಸಮಗ್ರ ಗ್ರಾಮೀಣ ಆಶ್ರಮ ಚಳವಳಿಯಲ್ಲಿ

### ಹೊಸ ಬೆಳಕಿನ ಜಾಡು ಹಿಡಿದ ಕೊರಗ ಸಮುದಾಯ



ಶಕುಂತಲಾ